# ವಿಕ ಡೈಲಿ ಡಾಕ್ಟರ್



**ಡಾ.ಸಿ.ಎನ್.ಮಂಜುನಾಥ್**
ಮುಖ್ಯಸ್ಥರು, ಜಯದೇವ ಹೃದ್ರೋಗ ವಿಜ್ಞಾನ, ಸಂಶೋಧನಾ ಸಂಸ್ಥೆ



## ಆಗಾಗ ನೋವು ಕಾಡುತ್ತಿದೆ

**ಪ್ರಶ್ನೆ:** ನನಗೆ 47 ವರ್ಷ ವಯಸ್ಸು. ನನಗೆ ಎದೆ ಹಾಗೂ ಎಡ ತೋಳಿನಲ್ಲಿ ಆಗಾಗ ನೋವು ಕಾಣಿಸಿಕೊಳ್ಳುತ್ತದೆ. ಜತೆಗೆ ನನಗೆ ಕುತ್ತಿಗೆಯಲ್ಲಿ ಸ್ಪಾಂಡಿಲೋಸಿಸ್ ಇದೆ. ಇದಕ್ಕೆ ಹೃದ್ರೋಗ ಸಮಸ್ಯೆ ಕಾರಣವೇ? ಪರಿಹಾರ ತಿಳಿಸಿ.

**-ಜಗದೀಶ್**, ಬೆಂಗಳೂರು

**ಉತ್ತರ:** ಹೃದ್ರೋಗ ಸಮಸ್ಯೆ ಇದ್ದವರಿಗೆ ಎದೆ ಭಾಗ, ಎಡಗೈ ಹಾಗೂ ಕುತ್ತಿಗೆ ನೋವು ಕಾಣಿಸಿಕೊಳ್ಳುವುದು ಸಾಮಾನ್ಯ. ಆದರೆ ನಿಮಗೆ ಹೃದ್ರೋಗದಿಂದಲೇ ಕಾಣಿಸಿಕೊಂಡ ನೋವೇ ಅಥವಾ ಮೂಳೆ ಸಂಬಂಧಿ ಸಮಸ್ಯೆಯೇ ಎಂಬುದನ್ನು ತಿಳಿಯಲು ನೀವು ಟ್ರೆಡ್‌ಮಿಲ್ ಇಸಿಜಿ ಮಾಡಿಸಿಕೊಳ್ಳಬೇಕು. ಇಸಿಜಿ ವರದಿ ನಾರ್ಮಲ್ ಬಂದರೆ ನಿಮ್ಮ ಕುತ್ತಿಗೆ ನೋವು ಮೂಳೆಗೆ ಸಂಬಂಧಿಸಿದ್ದು ಎಂಬುದು ತಿಳಿಯುತ್ತದೆ. ಯಾವುದಕ್ಕೂ ನೀವು ಒಳ್ಳೆಯ ಹೃದ್ರೋಗ ತಜ್ಞರ ಬಳಿ ತೋರಿಸಿ ಚಿಕಿತ್ಸೆ ಪಡೆದುಕೊಳ್ಳಿ.

**ನೀವೂ ಪ್ರಶ್ನೆ ಕೇಳಿ...**

**ವಿಕ ಡೈಲಿ ಡಾಕ್ಟರ್** ಅಂಕಣದ ಮೂಲಕ ಪ್ರತಿದಿನ ಆರೋಗ್ಯ ಸಂಬಂಧಿತ ಪ್ರಶ್ನೆಗಳನ್ನು ಕೇಳಿ ತಜ್ಞವೈದ್ಯರಿಂದ ಪರಿಹಾರ ಪಡೆದುಕೊಳ್ಳಬಹುದು.

**ವಾಟ್ಸ್ಆ್ಯಪ್: 7899578866**